

# ಚಂದ ಮಾಮ

1

ಸೂಚನೆಗಳು : ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಸಾಮೂಹಿಕವಾಗಿ ಹಾಡನ್ನು ಅಭಿನಯದೊಂದಿಗೆ ಹೇಳಿಕೊಟ್ಟು ಹಾಡಿಸುವುದು.

ಚಂದಮಾಮ ನೀನು ಹೇಗೆ
ಮೇಲೆ ಏರಿದೆ.. ?
ನಾನು ಬರುವೆ ನಿನ್ನ ಬಳಿಗೆ
ಹೇಳ ಬಾರದೆ... ?

ಮೊನ್ನೆ ನಿನ್ನ ರೂಪವಿತ್ತು
ಅರ್ಧ ಸಂಡಿಗೆ....!
ಇಂದು ನೀನು ಕಾಣುತಿರುವೆ
ಬಹಳ ದುಂಡಗೆ...!

ಸೂರ್ಯ ಬಂದ ಬಡನೆ
ಏಕೆ ಮಾಯವಾಗುವೆ ?
ತಿಂಗಳಲ್ಲಿ ಒಂದು ದಿನ
ಎಲ್ಲಿಗೆ ಹೋಗುವೆ ?

ಯಾರು ನಿನಗೆ ಇಂದ್ರ ಜಾಲ
ಹೇಳಿ ಕೊಟ್ಟರು....?
ಅಷ್ಟು ಮೇಲೆ ಒಬ್ಬನನ್ನೇ
ಹೇಗೆ ಬಿಟ್ಟರು....?

ನನ್ನನ್ನೊಮ್ಮೆ ನಿನ್ನ ಬಳಿಗೆ
ಕರೆಯ ಬಾರದೆ...?
ನನಗೂ ಇಂದ್ರ ಜಾಲವನ್ನು
ಕಲಿಸ ಬಾರದೇ...?



# ಕೊಲ್ಲಾರಿ ಬಂಡಿ

# 2

ಶಿಕ್ಷಕರಿಗೆ ಸೂಚನೆಗಳು : ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಹಾಡನ್ನು ಅಭಿನಯದೊಂದಿಗೆ ಹೇಳಿಕೊಟ್ಟು, ವಿದ್ಯಾರ್ಥಿಗಳಿಂದ ಹಾಡಿಸುವುದು.

ಅತ್ತಿಂದಿತ್ತ ಬಂತಪ್ಪ ಕೊಲ್ಲಾರಿ ಬಂಡಿ
ಗಿಲ್ಲಂಗ್ ಗಿಲ್ಲಂಗ್ ಗಿಲ್ಲಂಗ್ ಗಿಲ್ಲಂಗ್ ಗಿಲ್ಲಾಂ ಬಂಡಿ
ಎತ್ತಿನ ಕೋಡಿಗೆ ರೇಶಿಮೆ ಗೊಂಡೆ ॥

ಬಂಡಿಯ ಒಳಗಡೆ ಹುಲ್ಲಿನ ಪೆಂಡಿ
ಎತ್ತಿಗೂ ಹುಲ್ಲಿಗೂ ಐತಪ್ಪ ಕೊಂಡಿ
ಎತ್ತಿನ ಕೋಡಿಗೆ ರೇಶಿಮೆ ಗೊಂಡೆ ॥

ಗಾಡಿಯ ಮುಂದೆ ಗಣಪನ ಹುಂಡಿ
ಗಣಪನ ಮುಖದ ಆನೆಯ ಸೊಂಡಿ
ಅವ ಏನ್ ಕೇಳ್ತಾನ ಸಣ್ಣ ಸಣ್ಣ ಉಂಡಿ
ಎತ್ತಿನ ಕೋಡಿಗೆ ರೇಶಿಮೆ ಗೊಂಡೆ ॥



# ಬುದ್ಧಿವಂತ ಮಹಿಳೆ

# 3

**ಶಿಕ್ಷಕರಿಗೆ ಸೂಚನೆಗಳು : ಶಿಕ್ಷಕರು ಕಥೆಯನ್ನು ಅರ್ಥಪೂರ್ಣವಾಗಿ ಹೇಳಿ, ಸರಳ ಪ್ರಶ್ನೆಗಳನ್ನು ಕೇಳುವುದು.**

ಒಂದು ನಗರದಲ್ಲಿ ಸುಂದರಮ್ಮ ಎಂಬ ಅಜ್ಜಿ ಇದ್ದಳು. ಆಕೆ ತುಂಬಾ ಶ್ರೀಮಂತಳಾಗಿದ್ದಳು. ಅವಳ ಗಂಡ ತೀರಿ ಹೋಗಿದ್ದ. ಅವಳಿಗೆ ಮಕ್ಕಳಿರಲಿಲ್ಲ. ಸುಂದರಮ್ಮ ಆಳುಗಳನ್ನಿಟ್ಟುಕೊಂಡು ಮನೆಯಲ್ಲಿ ಒಬ್ಬಳೇ ವಾಸವಾಗಿದ್ದಳು.

ಒಮ್ಮೆ ಸುಂದರಮ್ಮನಿಗೆ ಕಣ್ಣಿನ ತೊಂದರೆ ಶುರುವಾಯಿತು. ಕಣ್ಣಿನ ತೊಂದರೆ ಜಾಸ್ತಿಯಾಗಿ ಕಣ್ಣೇ ಕಾಣಿಸದಂತಾಯಿತು. ಇದೇ ಊರಿನಲ್ಲಿ ಗೋವಿಂದರಾಯರು ಎಂಬ ಕಣ್ಣಿನ ವೈದ್ಯರಿದ್ದರು. ಅವರು ಸಮರ್ಥ ವೈದ್ಯರೆಂದು ಪ್ರಸಿದ್ಧಿಯಾಗಿದ್ದರು. ಸುಂದರಮ್ಮ ಈ ವೈದ್ಯರಿಗೆ ಹೇಳಿ ಕಳುಹಿಸಿದಳು ಗೋವಿಂದರಾಯರು ಬಂದು ಸುಂದರಮ್ಮನ ಕಣ್ಣನ್ನು ಪರೀಕ್ಷಿಸಿ ಪುನಃ ದೃಷ್ಟಿ ಬರುವಂತೆ ಮಾಡಬಹುದು ಎಂದು ತಿಳಿಸಿದರು.

ಚಿಕಿತ್ಸೆ ಮತ್ತು ಶುಲ್ಕದ ಬಗ್ಗೆ ಸುಂದರಮ್ಮ ಮತ್ತು ಗೋವಿಂದರಾಯರ ಮಧ್ಯೆ ಒಂದು ಒಪ್ಪಂದವಾಯಿತು. ಅದರಂತೆ ಗೋವಿಂದರಾಯರು ಸುಂದರಮ್ಮನ ಮನೆಗೆ ಪ್ರತಿನಿತ್ಯ ಭೇಟಿ ನೀಡಿ ಚಿಕಿತ್ಸೆ ನೀಡಬೇಕು ಮತ್ತು ಸುಂದರಮ್ಮನಿಗೆ ದೃಷ್ಟಿ ಮರಳಿ ಬಂದರೆ ಗೋವಿಂದರಾಯರಿಗೆ ಶುಲ್ಕವಾಗಿ ಎರಡು ಲಕ್ಷ ರೂ. ನೀಡಬೇಕೆಂದು ಹಾಗೂ ಒಂದು ವೇಳೆ ದೃಷ್ಟಿ ಮರಳಿ ಬರದಿದ್ದರೆ ಗೋವಿಂದ ರಾಯರಿಗೆ ಏನೂ ಶುಲ್ಕ ನೀಡುವ ಹಾಗಿಲ್ಲವೆಂದೂ ತೀರ್ಮಾನವಾಯಿತು. ಈ ರೀತಿ ತೀರ್ಮಾನಕ್ಕೆ ಇಬ್ಬರೂ ಒಪ್ಪಿಕೊಂಡರು.

ಒಪ್ಪಿದಂತೆ, ಗೋವಿಂದರಾಯರು ಪ್ರತಿ ದಿನ ಸುಂದರಮ್ಮನ ಮನೆಗೆ ಬರತೊಡಗಿದರು. ಹೀಗೆ ಪ್ರತಿದಿನ ಬರುತ್ತಿದ್ದ ಹಾಗೆ ಸುಂದರಮ್ಮನ ಮನೆಯಲ್ಲಿ ಅನೇಕ ಬೆಲೆ ಬಾಳುವ ವಸ್ತುಗಳನ್ನು ಕಂಡರು. ಅವುಗಳ ಮೇಲೆ ಆಸೆಯಾಯಿತು. ಇವನ್ನೆಲ್ಲ ತಮ್ಮ ಮನೆಗೆ ಸಾಗಿಸಬೇಕೆಂದು ಕೊಂಡರು. ಸುಂದರಮ್ಮನ ದೃಷ್ಟಿ ಮರಳಿ ಬರುವುದಕ್ಕೆ ಮುಂಚೆಯೇ ಇವುಗಳನ್ನು ಸಾಗಿಸಬೇಕೆಂದು ತೀರ್ಮಾನಿಸಿದರು. ಇದೇ ಉದ್ದೇಶದಿಂದ ಸುಂದರಮ್ಮನ ಕಣ್ಣಿನ ಚಿಕಿತ್ಸೆಯನ್ನು ನಿಧಾನ ಮಾಡತೊಡಗಿದರು ದಿನ ಒಂದೊಂದೇ ವಸ್ತುಗಳನ್ನು ಗೋವಿಂದರಾಯರು ತಮ್ಮ ಮನೆಗೆ ಸಾಗಿಸತೊಡಗಿದರು. ವಸ್ತುಗಳೆಲ್ಲವನ್ನೂ ಸಾಗಿಸಿದ ಮೇಲೆ ಚಿಕಿತ್ಸೆ ಪ್ರಾರಂಭಿಸಿದರು.

ಸ್ವಲ್ಪ ದಿನದಲ್ಲೇ ಸುಂದರಮ್ಮನಿಗೆ ದೃಷ್ಟಿ ಮರಳಿ ಬಂದಿತು. ಆನಂತರ ವೈದ್ಯ ಗೋವಿಂದರಾಯರು ತಮ್ಮ ಚಿಕಿತ್ಸೆ ಮುಗಿಯಿತೆಂದು, ತಮ್ಮ ಶುಲ್ಕ ೨ ಲಕ್ಷ ರೂ ನೀಡುವಂತೆ ಸುಂದರಮ್ಮನಿಗೆ ಕೇಳಿದರು. ಸುಂದರಮ್ಮ ವೈದ್ಯರ ಶುಲ್ಕ ನೀಡಲು ನಿರಾಕರಿಸಿದಳು. ವೈದ್ಯ ಗೋವಿಂದರಾಯರು ಅನೇಕ ಬಾರಿ ಕೇಳಿದರೂ ಸುಂದರಮ್ಮ ಶುಲ್ಕ ನೀಡದಿದ್ದಾಗ ಗೋವಿಂದರಾಯರು ನ್ಯಾಯಾಧೀಶರಿಗೆ ದೂರು ನೀಡಿದರು.

ನ್ಯಾಯಾಧೀಶರು ಸುಂದರಮ್ಮನನ್ನು ಕರೆದು ಪ್ರಶ್ನಿಸಿದರು 'ವೈದ್ಯರಿಗೆ ನೀನು ಏಕೆ ಹಣ ನೀಡುತ್ತಿಲ್ಲ...? ಸುಂದರಮ್ಮ ನ್ಯಾಯಾಧೀಶರ ಪ್ರಶ್ನೆಗೆ ಉತ್ತರಿಸುತ್ತಾ ''ಮಹಾಸ್ವಾಮಿ ನನಗೆ ಕುರುಡು ಆಗುವುದಕ್ಕೆ ಮುಂಚೆ ನನ್ನ



# ಬುದ್ಧಿವಂತ ಮಹಿಳೆ

# 3

ಮನೆಯಲ್ಲಿ ಅನೇಕ ಬೆಲೆ ಬಾಳುವ ವಸ್ತುಗಳಿದ್ದವು. ಅವು ಯಾವುದೂ ಈಗ ನನಗೆ ಕಾಣುತ್ತಿಲ್ಲ ಹಾಗಾಗಿ ನನಗೆ ದೃಷ್ಟಿ ಪೂರ್ತಿ ಬಂದಿಲ್ಲ ಆದ್ದರಿಂದ ಶುಲ್ಕ ನೀಡಲಾರೆ'' ಎಂದು ತಿಳಿಸಿದಳು. ನ್ಯಾಯಾಧೀಶರಿಗೆ ಎಲ್ಲವೂ ತಿಳಿಯಿತು.

ವೈದ್ಯರನ್ನು ಕರೆಸಿ ನ್ಯಾಯಾಧೀಶರು ಗದರಿಸಿದರು. ''ಏನು ಮಾಡಿದಿರಿ ತಿಳಿಸಿ'' ಗೋವಿಂದರಾಯರು ತಮ್ಮ ತಪ್ಪನ್ನು ಒಪ್ಪಿಕೊಂಡರು. ದುರಾಸೆಯಿಂದ ಹಾಗೆ ಮಾಡಿದೆ ದಯವಿಟ್ಟು ಕ್ಷಮಿಸಬೇಕೆಂದು ಕೋರಿದರು.

ನ್ಯಾಯಾಧೀಶರು ವೈದ್ಯರಿಗೆ ಸುಂದರಮ್ಮನ ಬೆಲೆ ಬಾಳುವ ವಸ್ತುಗಳನ್ನೆಲ್ಲಾ ಹಿಂತಿರುಗಿಸಬೇಕೆಂದು ಆಜ್ಞಾಪಿಸಿದರು. ಅಲ್ಲದೆ ೫೦ ಸಾವಿರ ರೂ ದಂಡ ವಿಧಿಸಿದರು.

ಮೋಸಗಾರ ವೈದ್ಯರಿಗೆ ತಕ್ಕ ಶಾಸ್ತಿ ಆಯಿತು.

ಮಹಿಳೆಯ ಬುದ್ಧಿವಂತಿಕೆಗೆ ತಕ್ಕ ಪ್ರತಿಫಲ ಸಿಕ್ಕಿತು.



# ಹಾಲು ಮೊಸರು

# 4

ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದನು. ಜಿಪುಣತನದೊಂದಿಗೆ ಅಹಂಕಾರವನ್ನೂ ಮೈಗೂಡಿಸಿ ಕೊಂಡಿದ್ದನು. ಈತ ಊರಿನ ಯಜಮಾನನೂ ಆಗಿದ್ದನು. ಅನೇಕ ಆಳುಗಳನ್ನು ಇಟ್ಟುಕೊಂಡು ದನಗಳನ್ನು ಸಾಕಿ ಹಾಲು ಮಾರಿ, ಬಂದ ಹಣವನ್ನು ಕೂಡಿಡುವುದರಲ್ಲಿಯೇ ಕಾಲ ಕಳೆಯುತ್ತಿದ್ದನು.

ಈತನೇ ಊರಿನ ಯಜಮಾನನಾಗಿದ್ದುದರಿಂದ ಊರ ಜನರನ್ನು ಹೆದರಿಸಿ ಅವರ ಮಕ್ಕಳನ್ನು ದನ ಕಾಯಲು ಬಿಡುತ್ತಿದ್ದನು. ಮಕ್ಕಳಿಗೆ ಶಾಲೆಗೆ ಹೋಗುವ ಆಸೆ...! ಆದರೆ ಮಾಡುವುದೇನು..? ಮುಂಜಾನೆ ಎದ್ದು ಇದ್ದ ಗಂಜಿ ನೀರನ್ನು ಕುಡಿದು; ಮಧ್ಯಾಹ್ನದ ಬುತ್ತಿ ಕಟ್ಟಿಕೊಂಡು ದನಗಳನ್ನು ಬಯಲಿಗೆ ಅಟ್ಟಿಕೊಂಡು ಸಂಜೆಯ ತನಕ ಕಾಯುವುದೇ ಅವರ ಕೆಲಸವಾಗಿತ್ತು.

ಧನಿಕನು ಸಂಜೆ ಹಾಗೂ ಬೆಳಗ್ಗೆ ದೊಡ್ಡ ಪಾತ್ರೆ ತುಂಬಾ ಹಾಲು ಕರೆಯುತ್ತಿದ್ದನು. ಆದರೂ ಮಕ್ಕಳಿಗೆ ಒಮ್ಮೆಯೂ ಒಂದು ತೊಟ್ಟು ಹಾಲನ್ನೂ ನೀಡಿದವನಲ್ಲ. ಎಲ್ಲಾ ಮಕ್ಕಳೂ ನೊರೆ ನೊರೆ ಹಾಲನ್ನು ನೋಡಿ ಆಸೆ ಪಡುತ್ತಿದ್ದರು.

ಧನಿಕನು ಬೆಳಗ್ಗೆ ಮಾರಿ ಉಳಿದ ಹಾಲನ್ನು ಬಿಸಿ ಮಾಡಿ ಸಂಜೆಗೆ ಇಡುತ್ತಿದ್ದನು. ಒಂದು ದಿನ ಒಬ್ಬ ಹುಡುಗನಿಗೆ ಹಾಲು ಕುಡಿಯಲೇ ಬೇಕೆಂಬ ಆಸೆಯಾಯಿತು. ಆತ ವೆಂಕು. ವೆಂಕು ಉಳಿದ ಹುಡುಗರ ಗುಂಪಿನಿಂದ ತಪ್ಪಿಸಿಕೊಂಡು ಹಾಲಿನ ಪಾತ್ರೆ ಇದ್ದಲ್ಲಿಗೆ ಬಂದನು. ಧನಿಕನು ಬಿಸಿ ಮಾಡಿ ಇಟ್ಟಿದ್ದ ಹಾಲು ಚೆನ್ನಾಗಿ ತಣಿದಿತ್ತು. ವೆಂಕು ಕಡಾಯಿಯನ್ನು ಬಗ್ಗಿಸಿ ನೋಡಿದನು ಆದರೆ ಅದರಲ್ಲಿ ಅರ್ಧದಷ್ಟೇ ಹಾಲು ಇತ್ತು ವೆಂಕನಿಗೆ ಹಾಲು ಎಟುಕಲೇ ಇಲ್ಲ. ಸಿಟ್ಟಿನಿಂದ ಪಕ್ಕದಲ್ಲಿದ್ದ ನಿಂಬೆ ಗಿಡದಿಂದ ನಿಂಬೆ ಹಣ್ಣನ್ನು ತಂದು ಜಜ್ಜಿ ಹಾಲಿಗೆ ಹಾಕಿದನು. ನಂತರ ಹೋಗಿ ತನ್ನ ಗೆಳೆಯರಿಗೆ ವಿಷಯ ತಿಳಿಸಿದನು.

ಸಂಜೆಯ ವೇಳೆಗೆ ಎಲ್ಲಾ ಮಕ್ಕಳು ಮತ್ತೆ ಹಾಲು ಕುಡಿಯಲು ಕಡಾಯಿಯ ಬಳಿ ಬಂದರು. ಆಗಲೂ ಅವರಿಗೆ ಹಾಲು ಎಟುಕಲಿಲ್ಲ. ಸಿಟ್ಟಿನಿಂದ ತಮ್ಮ ದನ ಕಾಯುವ ಕೋಲಿನಿಂದ ಹಾಲನ್ನು ಕಲಕಲು ಶುರು ಮಾಡಿದರು. ತಮ್ಮ ಸಿಟ್ಟು ಮುಗಿಯುವವರೆಗೂ ಕಲಕುತ್ತಲೇ ಇದ್ದರು. ಆಶ್ಚರ್ಯವೋ.... ಆಶ್ಚರ್ಯ ಹಾಲು ಮುದ್ದೆ ಮುದ್ದೆಯಾಗಿ ಮೇಲ್ಪದರದಲ್ಲಿ ನಿಲ್ಲತೊಡಗಿತು. ಮಕ್ಕಳಿಗೆ ಏನು ಮಾಡಬೇಕೆಂದು ತೋಚಲಿಲ್ಲ ಊರವರೆಲ್ಲರನ್ನೂ ಕರೆದರು ಓಡೋಡಿ ಬಂದ ಜನರು ಆ ಮುದ್ದೆಯ ರುಚಿ ನೋಡತೊಡಗಿದರು. ಅದು ಬಹಳ ರುಚಿಯಾಗಿತ್ತು ಆದರೂ ಏನೆಂದು ಗೊತ್ತಾಗಲಿಲ್ಲ.

ಪಕ್ಕದ ಊರಿನಿಂದ ಪಂಡಿತರನ್ನು ಕರೆ ತಂದರು. ಪಂಡಿತರು ಇದು ಬೆಣ್ಣೆ “ಕಾಯಿಸಿ ತಣಿಸಿದ ಹಾಲನ್ನು ಹಾಗೆ ಇಟ್ಟಾಗ ಅದು ಹಾಳಾಗುತ್ತದೆ ಆದರೆ ಅದಕ್ಕೆ ಹುಳಿ ಪದಾರ್ಥ ಅಥವಾ ಹೆಪ್ಪನ್ನು ಹಾಕಿದಾಗ ಅದು ಮೊಸರಾಗುತ್ತದೆ. ಮೊಸರನ್ನು ಚೆನ್ನಾಗಿ ಕಲಕಿದಾಗ ಅದರಿಂದ ಬೆಣ್ಣೆ ಸಿಗುತ್ತದೆ. ಹಾಲನ್ನು ಬೆಣ್ಣೆ ಮಾಡಿ ಮಾರುವುದರಿಂದ ಇನ್ನಷ್ಟು ಹಣ ಸಂಪಾದಿಸ ಬಹುದು” ಎಂದನು. “ಮಾತ್ರವಲ್ಲ ಹಾಲದರೋ ಹುಳಿ ಕೋಲಿನ ಪೆಟ್ಟು ತಿಂದರೂ ಒಳ್ಳೆಯದನ್ನೇ ಕೊಡುತ್ತದೆ. ಆದರೆ ಮನುಷ್ಯರು ಒಳ್ಳೆಯದನ್ನು ಪಡೆದರೂ ಕೆಟ್ಟದನ್ನೇ ಮಾಡುತ್ತಾರಲ್ಲ”! ಎಂದನು.

ಧನಿಕನಿಗೆ ಹೌದೆನಿಸಿತು... ತನ್ನ ಜಿಪುಣತನ ಹಾಗೂ ಅಹಂಕಾರವನ್ನು ದೂರ ಮಾಡಿದನು. ಮಕ್ಕಳಿಗೆ ಬೆಣ್ಣೆ ಮೊಸರು ನೀಡಿದನು. ಅಂದಿನಿಂದ ಎಲ್ಲರೂ ಸಂತೋಷದಿಂದ ಬಾಳ ತೊಡಗಿದರು.



# ಭೂತಾಯಿ ಕೊಟ್ಟ ಚಿನ್ನ

# 5

**ಸೂಚನೆ :** ಶಿಕ್ಷಕರು ಈ ಕಥೆಯನ್ನು ಹೇಳುತ್ತಾ, ಸರಳ ಪ್ರಶ್ನಾವಳಿಗಳ ಮೂಲಕ ಈ ಮೆಟ್ಟಿಲಿಗೆ ಬಂದ ಮಕ್ಕಳನ್ನು ಗಮನದಲ್ಲಿಟ್ಟು ಕೊಂಡು, ಮಕ್ಕಳ ಆಲಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು.

ಒಂದು ಊರಿನಲ್ಲಿ ಒಬ್ಬ ರೈತನಿದ್ದ. ಅವನಿಗೆ ಸ್ವಲ್ಪ ಭೂಮಿ ಇದ್ದರೂ ವ್ಯವಸಾಯ ಮಾಡದೆ ಸೋಮಾರಿಯಾಗಿ ಕಾಲಕಳೆಯುತ್ತಿದ್ದ. ಅವನ ಹೆಂಡತಿ ಬಹಳ ಬುದ್ಧಿವಂತೆಯಾಗಿದ್ದಳು. ಏನಾದರೂ ಉಪಾಯ ಮಾಡಿ ತನ್ನ ಗಂಡನನ್ನು ದುಡಿಯುವಂತೆ ಮಾಡಲು ಬಯಸಿದಳು. ಒಂದು ದಿನ ಅವಳು ತನ್ನ ಗಂಡನನ್ನು ಕರೆದು ''ನನಗೆ ರಾತ್ರಿ ಕನಸೊಂದು ಬಿತ್ತು. ಆ ಕನಸ್ಸಿನಲ್ಲಿ ಲಕ್ಷ್ಮೀ ದೇವಿ ಬಂದು ನಮ್ಮ ಭೂಮಿಯಲ್ಲಿ ಚಿನ್ನ ಸಿಗುತ್ತದೆ ಎಂದು ಹೇಳಿದಳು. ಹೆಂಡತಿಯ ಮಾತಿನಿಂದ ಹರ್ಷಗೊಂಡ ರೈತನು, ಚಿನ್ನದ ಆಸೆಯಿಂದ ಭೂಮಿಯನ್ನು ಅಗೆದನು. ಏನೂ ಸಿಗದಿದ್ದರಿಂದ ಲಕ್ಷ್ಮಿಯನ್ನು ಶಪಿಸಿದನು. ಆಗ ಹೆಂಡತಿ ''ಹೋಗಲಿ ಅಗೆದಿರುವ ನೆಲದಲ್ಲಿ ಬೀಜಗಳನ್ನಾದರೂ ಬಿತ್ತಿರಿ. ಅವುಗಳಿಂದಾದರೂ ಚಿನ್ನ ಹುಟ್ಟಬಹುದು'' ಎಂದಳು. ರೈತನು ಹಾಗೆಯೇ ಮಾಡಿ ಬೆಳೆ ಬರುವವರೆಗೂ ಎಚ್ಚರಿಕೆಯಿಂದ ಕಾದನು. ಚಿನ್ನದ ಬದಲು ಬರೀ ಬೆಳೆ ಬಂದದ್ದು ನೋಡಿ ಅವನಿಗೆ ನಿರಾಸೆಯಾಯಿತು. ಹೆಂಡತಿ ಬಂದ ಬೆಳೆಯನ್ನೆಲ್ಲಾ ಮಾರಿ ಬೆಳ್ಳಿಯ ನಾಣ್ಯಗಳನ್ನು ತಂದು ಚೀಲಗಳಲ್ಲಿ ತುಂಬಿಸಿಟ್ಟಳು. ಗಂಡನಿಗೆ ತೋರಿಸಿ ''ನೋಡಿ ನೀವು ಬೆಳೆದ ಬೆಳೆಯೆಲ್ಲಾ ಬೆಳ್ಳಿಯಾಗಿದೆ'' ಎಂದಳು.

ಮುಂದಿನ ಬಾರಿ ಗಂಡನಿಗೆ ಹೇಳಿ ಗೋಧಿಯನ್ನು ಬಿತ್ತಿಸಿದಳು. ಚೆನ್ನಾಗಿ ಬೆಳೆ ಬಂದ ನಂತರ ಅದನ್ನು ಮಾರಿ ಚಿನ್ನದ ನಾಣ್ಯಗಳನ್ನು ಚೀಲಗಳಲ್ಲಿ ತುಂಬಿಸಿಟ್ಟಳು. ಗಂಡನಿಗೆ ತೋರಿಸಿ ''ನೋಡಿ ನೀವು ಬೆಳೆದ ಬೆಳೆಯೆಲ್ಲಾ ಚಿನ್ನವಾಗಿದೆ'' ಎಂದಳು. ರೈತನಿಗೆ ತುಂಬಾ ಸಂತೋಷವಾಯಿತು.

ದುಡಿಮೆಯ ಫಲವನ್ನರಿತ ಆ ರೈತ ಅಂದಿನಿಂದ ಶ್ರಮವಹಿಸಿ ದುಡಿಯ ತೊಡಗಿದ. ಕೆಲವೇ ದಿನಗಳಲ್ಲಿ ಅವನು ಶ್ರೀಮಂತನಾದನು.

**ಪ್ರಶ್ನೆಗಳು :**

1. ರೈತ ಹೇಗೆ ಕಾಲ ಕಳೆಯುತ್ತಿದ್ದನು ?
2. ರೈತನ ಹೆಂಡತಿ ಏನು ಬಯಸಿದಳು ?
3. ರೈತ ಲಕ್ಷ್ಮಿಯನ್ನು ಏಕೆ ಶಪಿಸಿದ ?
4. ರೈತನ ಹೆಂಡತಿ ಯಾವ ಬೆಳೆಯನ್ನು ಚಿನ್ನವಾಗಿಸಿದಳು ?
5. ರೈತನಿಗೆ ಏಕೆ ಸಂತೋಷವಾಯಿತು ?
6. ಈ ಕಥೆಯ ನೀತಿಯೇನು ?